ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/09/2016-17. ದಿನಾಂಕ:27-09-2016.

| ವಾದಿಗಳು | ಪ್ರತಿವಾದಿಗಳು |
|---|---|
| ಎನ್.ಬಸಮ್ಮ ಗಂಡ ಲೇಟ್ ಎನ್.ರುದ್ರಪ್ಪ<br>ಆಲೂರು ಗ್ರಾಮ<br>ಕೂಡ್ಲಿಗಿ ತಾಲೂಕು | ಎನ್.ಎ.ಲವ ತಂದೆ ಎನ್.ಆಂಜೀನೇಯಲು<br>ಆಲೂರು ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಆಲೂರು ಗ್ರಾಮದ ಸನಂ 422ಬಿ. ವಿಸ್ತೀರ್ಣ 1-83. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಆಲೂರು ಗ್ರಾಮದ ಸನಂ 422ಬಿ. ವಿಸ್ತೀರ್ಣ 1-83. ಎಕ್ರೆ ಜಮೀನನ್ನು ಸದರಿ ಗ್ರಾಮದ ಎನ್.ಬಸಮ್ಮ ಗಂಡ ಲೇಟ್ ಎನ್.ರುದ್ರಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಆಲೂರು ಇವರು ನಮೂನೆ-21 ನೋಟಿಸನ್ನು ದಿನಾಂಕ 02-11-2011 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಎನ್.ಎ.ಲವ ತಂದೆ ಎನ್.ಆಂಜೀನೇಯಲು ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್:20/2011-12. ದಿನಾಂಕ 04-12-2011.ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 13-06-2016 ರಿಂದ 27-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಆಲೂರು ಗ್ರಾಮದ ಸನಂ 422ಬಿ. ವಿಸ್ತೀರ್ಣ 1-83. ಎಕ್ರೆ ಜಮೀನು ನಮ್ಮ ಮಾವನವರಾದ ನೇವಾರ ಬಸಪ್ಪ ಅಲಿಯಾಸ್ ಸಣ್ಣ ತಿಮ್ಮಪ್ಪ ತಂದೆ ಕುಂಬಣ್ಣ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಹೊಂದಿದ್ದು ಇವರು ದಿನಾಂಕ 07-03-1977 ರಂದು ಹಾಗೂ ನಮ್ಮ ಅತ್ತೇ ಬಸಮ್ಮ ಗಂಡ ಬಸಪ್ಪ ಇವರು ದಿನಾಂಕ 10-12-1981 ರಂದು ಹಾಗೂ ನನ್ನ ಗಂಡನಾದ ಎನ್.ರುದ್ರಪ್ಪ ತಂದೆ ಸಣ್ಣ ತಿಮ್ಮಪ್ಪ ಇವರು ದಿನಾಂಕ 08-06-2006 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಹಾಗೂ ಸದರಿ ವಿವಾದಿತ ಜಮೀನು ಖಾತೆದಾರರ ಸ್ವಯಾರ್ಜಿತ ಆಸ್ಥಿಯಾಗಿದ್ದು ಅದರಲ್ಲಿ ತಕರಾರುದಾರರಿಗೆ ಯಾವುದೇ ಹಕ್ಕು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಸದರಿ ವಿವಾದಿತ ಜಮೀನು ನೇವಾರ ಬಸಪ್ಪ ಇವರು ಖರೀದಿಸಿದ ಜಮೀನು ಆಗಿರುವುದರಿಂದ ನೇರ ವಾರಸುದಾರರಾದ ನಮಗೆ ಸದರಿ ಜಮೀನು ಸೇರತಕ್ಕದ್ದೇಂದು ತಿಳಿಸಿರುತ್ತಾರೆ.

ಹಾಗೂ ಸದರಿ ಜಮೀನು ಅವಿಭಕ್ತ ಕುಟುಂಬದಿಂದ ಭಾಗ ಆಗೀರದೇ ಖರೀದಿಸಿದ ಸ್ವತ್ತು ಆಗಿರುವುದರಿಂದ ಅದನ್ನು ನೇರ ವಾರಸುದಾರರಾದ ಹಾಗೂ ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ಪೋತಿವಿರಾಸತ್ ಪ್ರಕಾರ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮು.ತಿ.ನೋ-2

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನು ನಮ್ಮ ಮತ್ತು ಅರ್ಜಿದಾರರು ಇತರರು ಅವಿಭಕ್ತ ಕುಟುಂಬದಲ್ಲಿದ್ದಾಗ ಖರೀದಿಯಾದ ಜಮೀನಾಗಿರುವುದೆಂದು ತಿಳಿಸುತ್ತಾ ಅವಿಭಕ್ತ ಕುಟುಂಬದಲ್ಲಿದ್ದಾಗ ಖರೀದಿಸಿದ ಆಸ್ತೀಯಾಗಿರುವುದರಿಂದ ಅದರಲ್ಲಿ ನಮಗೂ ಹಕ್ಕು ಇರುತ್ತದೇಯೇಂದು ವಾದ ಮಂಡಿಸಿರುತ್ತಾರೆ.

ಹಾಗೂ ಅರ್ಜಿದಾರರಾದ ಎನ್.ಬಸಮ್ಮ ಇವರು ದಿನಾಂಕ 09-11-2012 ರಂದು ಬರೆಸಿ ಕೊಂಡ ಪಾಲು ವಿಭಾಗ ಪತ್ರವನ್ನು ಸಲ್ಲಿಸುತ್ತಾ ಅದರಲ್ಲಿ ತಾವೆಲ್ಲರೂ ಅವಿಭಕ್ತ ಕುಟುಂಬವೊಂದರ ಭಾಗವಾಗಿರುವುದಾಗಿ ತಿಳಿಸಿರುವುದರಿಂದ ವಿವಾದಿತ ಸ್ವತ್ತು ಸಹಾ ಅವಿಭಕ್ತ ಕುಟುಂಬದ ಸ್ವತ್ತಿನಿಂದ ಪರಿಗಣಿಸಲೇ ಬೇಕಾಗುತ್ತದೆ ಎಂದು ವಾದವನ್ನು ಮಂಡಿಸಿರುತ್ತಾರೆ. ಆದರೇ ಉಳಿದ ಸ್ವತ್ತುಗಳಲ್ಲಿ ಆಸಕ್ತಿ ಇಲ್ಲದೇ ಇರುವುದು ಅವುಗಳು ಯಾವುದೇ ತಕರಾರನ್ನು ಸಲ್ಲಿಸಿಲ್ಲವೆಂದು ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಸಲ್ಲಿಸಿದ ದಾಖಲೆ ಮತ್ತು ತಕರಾರುದಾರರ ಸಲ್ಲಿಸಿದ ದಾಖಲೆಗಳನ್ನು ಮತ್ತು ಮಂಡಿಸಿದ ವಾದವನ್ನು ಗಣನೆಗೆ ತೆಗೆದು ಕೊಂಡು ವಿವಾದಿತ ಸ್ವತ್ತಿನ ಹಕ್ಕು ಬದಲಾವಣೆಗೆ ಮಾತ್ರ ತಕರಾರುದಾರರು ಸಲ್ಲಿಸಿದ ಆಕ್ಷೇಪಣೆ ವ್ಯಕ್ತಪಡಿಸಿರುವುದು ಕಂಡು ಬಂದಿದ್ದು ಅದೇ ರೀತಿ ಕೆಲ ಸ್ವತ್ತುಗಳ ವಿಷಯದಲ್ಲಿ ಸದರಿ ಸ್ವತ್ತುಗಳೇಂದು ಮೊದಲು ಪರಿಗಣಿಸದೇ ಅರ್ಜಿದಾರರು ನಂತರ ಆ ಬಗ್ಗೆ ಉಲ್ಲೇಖಿಸಿರುವುದು ಸಂಶಯಕ್ಕೆ ಈಡಾಗಿರುವುದರ ಕಾರಣ ಹಾಗೂ ಈ ಪ್ರಕರಣದಲ್ಲಿ ಸ್ವತ್ತಿನ ಹಕ್ಕಿನ ಬಗ್ಗೆ ವಿವಾದ ಉಂಟಾಗಿರುವುದರಿಂದ ಈ ಕೆಳಗಿನಂತೆ ಆದೇಶ ಮಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಆಲೂರು ಗ್ರಾಮದ ಸನಂ 422ಬಿ. ವಿಸ್ತೀರ್ಣ 1-83. ಎಕ್ರೆ ಜಮೀನಿನ ಸ್ವತ್ತಿನ ಹಕ್ಕಿನ ಬಗ್ಗೆ ವಿವಾದ ಉಂಟಾಗಿರುವುದರಿಂದ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸುತ್ತಾ ಬಾದಿತರಾದವರು ಸಿವಿಲ್ ನ್ಯಾಯಾಲಯದ ಮೊರೆ ಹೋಗಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಅದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 27-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎನ್.ಬಸಮ್ಮ ಗಂಡ ಲೇಟ್ ಎನ್.ರುದ್ರಪ್ಪ ಆಲೂರು ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎನ್.ಎ.ಲವ ತಂದೆ ಎನ್.ಆಂಜೀನೇಯಲು ಅಲೂರು ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.